ಕ್ರ.ಸಂ.	ಫಲಾನುಭವಿಗಳ ಹೆಸರು	ತಂದೆ:ಗಂಡನ ಹೆಸರು	ನಿವೇಶನ ಸಂಖ್ಯೆ
17.	ಪ್ರಕಾಶ್	ಶಿವರುದ್ರಪ್ಪ	63
18.	ಎಂ. ರಮೇಶ್	ಮರಿಯಪ್ಪ	68
19.	ಆರ್. ಶಿವಕುಮಾರ್	ರಾಜಶೇಖರಯ್ಯ	83
20.	ಪುಷ್ಪ	ಶ್ರೀಧರ	84
21.	ಲತಶೆಟ್ಟಿ	ಶ್ರೀಧರ	85
22.	ಲಕ್ಷ್ಮಯ್ಯ	ಚೆಟ್ಟಪ್ಪ	86
23.	ತಿಮ್ಮಕ್ಕ	ತಿಮ್ಮಯ್ಯ	87
24.	ಶ್ರೀನಿವಾಸ	ಲಕ್ಷ್ಮಯ್ಯ	88
25.	ಕುಳ್ಳಮ್ಮ	ಬೆಟ್ಟಪ್ಪ	89

ಬೆಳಗಾವಿ ಜಿಲ್ಲೆಯ ಮುರಗೋಡು ಗ್ರಾಮದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಪರಿಸರ ಹಾಳಾಗುತ್ತಿರುವುದು

3836 (4436) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಹಾಗೂ ನೇಸರಗಿ ಮತ್ತು ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಪರಿಸರ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ ಪರಿಸರ ಕಾಪಾಡುವ ಸಂಬಂಧವಾಗಿ ಸೂಕ್ತ ಆದೇಶ ನೀಡಲಾಗುವುದೇ;

ಇ) ಇದನ್ನು ಹೋಗಲಾಡಿಸಲು ಸರಕಾರ ಕೈಗೊಂಡ ಕ್ರಮವೇನು;

ಈ) ಪರಿಸರ ಹಾಳಾಗದಂತೆ ಬಸ್ ನಿಲ್ದಾಣಗಳಲ್ಲಿರುವ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಆಧುನಿಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ.ಆರ್. ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಹೌದು.

ಆ) ಹೌದು

ಇ) ಬೆಳಗಾವಿ ಜಿಲ್ಲೆ (1) ಬೈಲಹೊಂಗಲ್ ಬಸ್ ನಿಲ್ದಾಣದ ಶೌಚಾಲಯವನ್ನು ಆಧುನೀಕರಣಗೊಳಿಸಲು ಚಾಲ್ತಿ ವರ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದು

(2) ನೇಸರಗಿ ಬಸ್ ನಿಲ್ದಾಣದ ಶೌಚಾಲಯಕ್ಕೆ 2002–03 ಸಾಲಿನಲ್ಲಿ ಟೈಲ್ಸ್ ಅಳವಡಿಸಿ ಆಧುನೀಕರಣಗೊಳಿಸಲಾಗಿದ್ದು, ಸುಣ್ಣ ಬಣ್ಣ ಹಚ್ಚಲಾಗಿದೆ.

(3) ಸವದತ್ತಿ ತಾಲ್ಲೂಕಿನ ಮುರಗೋಡು ಗ್ರಾಮದಲ್ಲಿರುವ ಬಸ್ ನಿಲ್ದಾಣದ ಕಟ್ಟಡಕ್ಕೆ 2001–02ನೇ ಸಾಲಿನಲ್ಲಿ ಬಣ್ಣವನ್ನು ಹಚ್ಚಲಾಗಿದೆ. ಸುಣ್ಣ ಬಣ್ಣದ ಕೆಲಸ ನಿರ್ವಹಿಸಿ ಸುಮಾರು ಒಂದೂವರೆ ವರ್ಷವಾಗಿರುತ್ತದೆ.

2003–04ನೇ ಸಾಲಿನಲ್ಲಿ ಸಣ್ಣ ಕಾಮಗಾರಿ ಕೆಲಸಗಳಿಗಾಗಿ ಈಗಾಗಲೇ ರೂಪಾಯಿ 70.00 ಲಕ್ಷಗಳಷ್ಟು ಅನುದಾನ ಬಿಡುಗಡೆಗೊಳಿಸಲಾಗಿದ್ದು, ಬೆಳಗಾವಿ ಕಾಮಗಾರಿ ಉಪವಿಭಾಗಕ್ಕೆ ರೂಪಾಯಿ 8.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಿ ಬಸ್ ನಿಲ್ದಾಣಗಳ ಪರಿಸರ ಕಾಪಾಡುವುದಕ್ಕೆ ಆದ್ಯತೆ ನೀಡಲು ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಈ) ಹೌದು.

ಬಿಜಾಪುರ ಜಿಲ್ಲೆಗೆ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಕ್ರಮ

3861 (4646) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರ ಪರಿಹಾರ ಯೋಜನೆಯಡಿ ಬಿಜಾಪುರ ಜಿಲ್ಲೆಗೆ ಮಂಜೂರಾದ ಹಾಗೂ ಬಿಡುಗಡೆ ಮಾಡಿದ ಅನುದಾನವೆಷ್ಟು:

ಆ) ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ಬಿಜಾಪುರ ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು:

ಇ) ಬರ ಪರಿಹಾರ ಯೋಜನೆಯಡಿ ಬಿಜಾಪುರ ತಾಲ್ಲೂಕಿನಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು?

ಈ) ಕಾಮಗಾರಿಗಳಿಗಾಗಿ ಮಾಡಿದ ವೆಚ್ಚವೆಷ್ಟು: (ಕಾಮಗಾರಿಗಳವಾರು ಮಾಹಿತಿ ನೀಡುವುದು):

ಉ) ಇಲ್ಲಿಯವರೆಗೂ ಅಭಾವ ಪರಿಸ್ಥಿತಿ ಇದ್ದು ಪರಿಹಾರಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಪ್ರಕೃತಿ ವಿಕೋಪ/ ಎಸ್.ಸಿ.ಸಿ.ಎಫ್. ನಡಿಯಲ್ಲಿ 2002–03ನೇ ಸಾಲಿನಲ್ಲಿ ರೂ. 427.40 ಲಕ್ಷ ಹಾಗೂ 2003–04ನೇ ಸಾಲಿನಲ್ಲಿ ಇದುವರೆಗೆ ರೂ. 288.80 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) ತಾಲ್ಲೂಕುವಾರು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿಲ್ಲ.

ಇ) ಬರ ಪರಿಹಾರ ಯೋಜನೆಯಡಿಯಲ್ಲಿ ತಏರೆದ ಬಾವಿ ಕೆರೆ ಹೂಳೆತ್ತುವುದು ನಾಲಾ ಬಂಡಿಂಗ್, ರಸ್ತೆ ದುರಸ್ತಿ ಇತ್ಯಾದಿ ಒಟ್ಟು 1846 ಕಾಮಗಾರಿಗಳನ್ನು ಜಿಲ್ಲೆಯು ತೆಗೆದುಕೊಳ್ಳಲಾಗಿದೆ.

ಈ) ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ ನಗದು ವೆಚ್ಚ ರೂ. 287.39 ಲಕ್ಷಗಳು ಹಾಗೂ ಆಹಾರಧಾನ್ಯ ರೂಪದಲ್ಲಿ 23883 ಮೆ:ಟನ್ ಖರ್ಚು ಮಾಡಲಾಗಿದೆ. ಕಾಮಗಾರಿಗಳ ವಿವರ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಅನುಷ್ಠಾನಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿದೆ.

ಉ) ಉದ್ಯೋಗ ಸೃಜನೆಗಾಗಿ ಎಸ್.ಜಿ.ಆರ್.ವೈ ವಿಶೇಷ ಘಟಕದ ಅಡಿಯಲ್ಲಿ ಆಹಾರಧಾನ್ಯ ಹಾಗೂ ಅನುದಾನ ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಜಾನುವಾರುಗಳಿಗೆ ಮೇವು, ಔಷಧಿ ಇತ್ಯಾದಿಗಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಸಾಲದ ಮೇಲಿನ ಬಡ್ಡಿ ಮನ್ನಾ, ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪೂರೈಕೆ, ಭೂಕಂದಾಯ ಮನ್ನಾ ಇತ್ಯಾದಿ ಪರಿಹಾರ ಕ್ರಮ ತೆಗೆದುಕೊಳ್ಳಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ದಿನಗೂಲಿ ನೌಕರರು

3879 (3226) : ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?